# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಹತ್ತಿರ, ಬೆಂಗಳೂರು**

ಸಂಖ್ಯೆ:ಸ.ಇಂ/ವಾ–119/ವಾರ್ಡ್ ಸಭೆ/2020–21

ದಿನಾಂಕ:04/01/2021

## ವಾರ್ಡ್ –119ರ ವಾರ್ಡ್ ಸಭೆಯ ನಡವಳಿ

ದಿನಾಂಕ:04/01/2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :–**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್–119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್–119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್–119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್–119.
5. ಶ್ರೀ. ದೊರೈರಾಜು, ಕಂದಾಯ ಪರಿವೀಕ್ಷಕರು.
6. ಶ್ರೀ. ಶಂಕರ್, ಕಂದಾಯ ಪರಿವೀಕ್ಷಕರು.
7. ಶ್ರೀ. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು.
8. ಶ್ರೀ. ಕೆ.ಎಸ್. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.
9. ಶ್ರೀ. ಸಂಪತ್, ಮೀಟರ್ ರೀಡರ್ BWSSB

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

## ಚರ್ಚಿಸಲಾದ ವಿಷಯಗಳು:-

### 1. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರು ಮಾತನಾಡಿ, ಘನತ್ಯಾಜ್ಯ ಅಧಿಕಾರಿಗಳನ್ನು ಉದ್ದೇಶಿಸಿ ಘನತ್ಯಾಜ್ಯ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿರುವ ಬಗ್ಗೆ ಪ್ರಶ್ನಿಶಿದರು.

ಈ ಬಗ್ಗೆ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಮಾತನಾಡಿ ಸಾರ್ವಜನಿಕರಿಂದ ಆಗಿಂದಾಗೆ ಬರುವ ದೂರುಗಳಿಗೆ ಸ್ಪಂದಿಸಲಾಗುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿರುವುದಾಗಿ ತಿಳಿಸಿದರು.

### 2. ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-

ಧರ್ಮರಾಯಸ್ವಾಮಿ ವಾರ್ಡಿಗೆ ಸಂಬಂಧಪಟ್ಟಂತೆ, ಕೋವಿಡ್ ಸಾಂಕ್ರಾಮಿಕ ರೋಗ ಹರಡುವಿಕೆ ತಡೆಯುವ ಬಗ್ಗೆ ವಿಚಾರಿಸಲಾಗಿ ದಿನೇ ದಿನೇ ಕೋವಿಡ್ ರೋಗವು ಹತೋಟಿಗೆ ಬರುತ್ತಿದ್ದು, ಸಾರ್ವಜನಿಕರ ಸಹಕಾರಕ್ಕೆ ಹರ್ಷ ವ್ಯಕ್ತಪಡಿಸಿ ಶೀಘ್ರವಾಗಿ ಈ ಮಾರಕ ಸಮಸ್ಯೆಯಿಂದ ಹೊರಬರುವುದಾಗಿ ತಿಳಿಸಿರುತ್ತಾರೆ. ಹಾಗೂ ಕೋವಿಡ್ ವ್ಯಾಕ್ಸಿನ್ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿರುತ್ತಾರೆ.

### 3. ಕಂದಾಯ ವಿಭಾಗ:-

ಕಂದಾಯ ವಿಭಾಗವನ್ನು ಉದ್ದೇಶಿಸಿ ಅಧ್ಯಕ್ಷರು ಮಾತನಾಡಿ ಪ್ರತಿ ವಾರದ ಕಂದಾಯ ವಸೂಲಾತಿ ಬಗ್ಗೆ ಪ್ರಗತಿ ಸಾಧಿಸಲು ಸೂಚಿಸಿದರು.

ಕಂದಾಯ ಪರಿಷ್ಕರಣೆ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಆಸ್ತಿಗಳಿಗೆ ತಪ್ಪಾಗಿ ಮೌಲ್ಯಮಾಪನ ಮಾಡಿ ತೆರಿಗೆ ಪಾವತಿಸಿರುವ ಮಾಲೀಕರ ಆಸ್ತಿಗಳನ್ನು ಪರಿಷ್ಕರಣೆ ಮಾಡುವಂತೆ ಮತ್ತೊಮ್ಮೆ ಸೂಚಿಸಿದರು.

### 4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:-

BWSSB ಗೆ ಸಂಬಂಧಪಟ್ಟಂತೆ ಬಂದ ಕಳೆದ ಸಭೆಯಲ್ಲಿ ಕುಂಬಾರ ಪೇಟೆ, ರಾಗಿ ಪೇಟೆ, ಓ.ಕೆ. ರಸ್ತೆಗಳಲ್ಲಿ ಒಳಚರಂಡಿ ಸಮಸ್ಯೆ ಇದ್ದು, ಈ ಬಗ್ಗೆ ಬಂದ ದೂರುಗಳನ್ನು ಶ್ರೀಘ್ರ ಪರಿಹರಿಸಲು ಹಾಜರಿದ್ದ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ವಾರ್ಡಿಗೆ ಸಂಬಂಧಪಟ್ಟ ಅಭಿಯಂತರರಾದ ಶ್ರೀ. ಚೆನ್ನಾಪ್ಪಾಜಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು.

ಮು.ತಿ.ನೋ..

ವಾರ್ಡ್ ಪ್ರದೇಶಗಳಲ್ಲಿ ಅನಧಿಕೃತವಾಗಿ ಪೆಟ್ಟಿ ಅಂಗಡಿಗಳನ್ನು ಇಡುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಯಿತು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಗೈರುಹಾಜರಾದ ಅಧಿಕಾರಿಗಳಿಗೆ ಎಚ್ಚರಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಎಚ್ಚರಿಸಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್‌ಕುಮಾರ್ ಎನ್)
ಕಾರ್ಯದರ್ಶಿ
ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ

(ಡಿ.ಕೆ. ಮಧುಸೂದನ್) 9/1/21
ನೋಡಲ್ ಅಧಿಕಾರಿ
ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ